ಅನಸೂಯ ಟಿ, ಕೇದಿಗೆಮನೆ

ನಗರದ ಹಸುಗಳು ಹುಲ್ಲು ಕೊಟ್ಟರೆ ತಿನ್ನಲು ಒಲ್ಲೆ ಎನ್ನುತ್ತಿವೆಯಲ್ಲ ಗುರುವೇ?



ಪ್ಲಾಸ್ಟಿಕ್ ಕವರಲ್ಲಿ ಹಾಕಿಕೊಡಿ; ಬಡಪ್ರಾಣಿಗಳಿಗೆ ಕುಪ್ಪೆಯಿಂದ ಕವರ್ ಸಮೇತ ತಿಂದೇ ಅಭ್ಯಾಸ.

ಹೆಚ್.ವಿ. ಶ್ರೀಧರ್, ಬೆಂಗಳೂರು

ಇತ್ತೀಚೆಗೆ ಯಥೇಚ್ಛವಾಗಿ 'ಉಚಿತ ಲೋಡ್ ಶೆಡಿಂಗ್ ಭಾಗ್ಯ'ಗಳು ಖಚಿತವಾಗುತ್ತಿವೆಯಲ್ಲ?

ಸರಿಯೇ. ಓವರ್‌ಹೆಡ್ ಟ್ಯಾಂಕ್ ತುಂಬುವವರೆಗೆ ನಲ್ಲಿಯಲ್ಲಿ ಬರಿ ಗಾಳಿಯೇ.

ಮಲ್ಲಿಕಾರ್ಜುನ, ಸುರಧೇನುಪುರ

ಹಾಲು ಕುಡಿದಷ್ಟೇ ಖುಷಿ. ಆಲ್ಕೋಹಾಲ್ ಕುಡಿದಷ್ಟೇ...?

ಖುದ್‌ಖುಷಿ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ಮದ್ಯಸೇವನೆಗೆ ಮುಂಚೆ ಗ್ಲಾಸುಗಳನ್ನು ಡಿಕ್ಕಿ ಹೊಡೆದು ಚಿಯರ್ಸ್ ಹೇಳುವುದೇಕೆ?



ಲೋಟದ ಡಿಕ್ಕಿ ಕುಡುಕರ ವಕ್ರನಡೆಯ ಸಂಕೇತ; ಕುಡಿದ ಮೇಲೆ 'ಛಿ!'ಯೂ, ಅರಸನೂ ಒಂದೇ ಎನ್ನುವುದೇ 'ಛಿಯರ್ಸ್!'

ಎಸ್.ಸಿ. ರಮೇಶ್, ಮೈಸೂರು

ಆಯಾ ಧರ್ಮದವರ ರೀತಿ ವೇಷಭೂಷಣ ತೊಡುವ ಅವಕಾಶವಾದಿ ರಾಜಕಾರಣಿಗಳು ಶ್ರವಣಬೆಳಗೊಳಕ್ಕೆ ಹೋದರೆ?

ಆ ವೈರಾಗ್ಯದ ಮೂರ್ತಿಯ ಮುಂದೆ ಮನ ಬೆತ್ತಲಾಗಿ ಉತ್ತಮರಾಗಿ ಮರಳುವರು.

ಅಂಚೆ ಸುಬ್ರಹ್ಮಣ್ಯ, ಕೊಪ್ಪ

ನೀವು ಈ ಪ್ರಶ್ನೆಯನ್ನೂ ಸೇರಿ ಇದುವರೆಗೆ ಎಷ್ಟು ಪ್ರಶ್ನೆಗಳಿಗೆ ಉತ್ತರಿಸಿದ್ದೀರಿ?

ತಲೆಯಿಂದ ಉದುರಿರುವ ಕೂದಲುಗಳ ಸಂಖ್ಯೆಯ ಮೇಲೆ ಒಂದರಷ್ಟು.

ಚಿಕ್ಕೋಬನಹಳ್ಳಿ ಚಾಂದ್ ಬಾಷ, ತಳಕು

ಮನುಷ್ಯ ಈ ಪ್ರಪಂಚಕ್ಕೆ, ಪರಿಸರಕ್ಕೆ ಯಾಕೆ ಬೇಕು?

ಅವೆಲ್ಲಿ ಬೇಕೆಂದು ಅರ್ಜಿ ಹಾಕಿದವು? ಮನುಷ್ಯ ವಿಶ್ವವೆಂಬ ಕಂಪ್ಯೂಟರಿಗೆ ಅಡರಿದ ದುಷ್ಟ ವೈರಸ್.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಪ್ರೀತಿ, ಪ್ರೇಮ ಅಲ್ಲವೂ ಬರೇ ಬದನೇಕಾಯಿ ಅನ್ನೋ ಮಾತು ಎಷ್ಟು ಸರಿ?

ಸರಿಯಲ್ಲ; ಅದು ಹುರುಳಿನ ಕಾಯಿ, ಬೆಂಡೇ (bend) ಕಾಯಿ, ಕಡೆಗೆ ಗೋರಿ ಕಾಯಿಯೂ ಹೌದು.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು

ಯಕ್ಷನಿಂದ ಐದೇ ಪ್ರಶ್ನೆ. ರಾಮ್‌ಗೇಕೆ ಲಕ್ಷ ಪ್ರಶ್ನೆ?

ಯಕ್ಷನ ಲಕ್ಷ್ಯಕ್ಕೆ ಸಿಕ್ಕವರು ಐದೇ. ರಾಮ್‌ಗೆ ವಾರವಾರಕ್ಕೂ ಲಕ್ಷ ಜನರ ಲಕ್ಷ್ಯ.

ಎಂ.ಸಿ. ಧನ್ಯತಾ, ಬೆಂಗಳೂರು

ಶೂನ್ಯ ಸಂಪಾದನೆ ಎಂದರೇನು?

ಹಲವಾರು ವಿದ್ಯಾರ್ಥಿಗಳ ಎಸ್ಸೆಸ್ಸೆಲ್ಸಿ ಮ್ಯಾಥ್ಸ್ ಮಾರ್ಕ್ಸ್.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಪಕ್ಷಕ್ಕೆ ಬೆನ್ನೆಲುಬು ಇಲ್ಲದಿದ್ದರೆ?

ಅವಶ್ಯವಿಲ್ಲ. ಪಕ್ಷದಲ್ಲಿ ಯಾವ ಹಾವುಗಳಿಗೂ ಇರುವುದಿಲ್ಲವಲ್ಲ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ

ಕೆಲಸ ಆಗಬೇಕೆಂದರೆ ಕತ್ತೆಕಾಲು ಹಿಡಿಯಬೇಕು ಸರಿ. ಆದರೆ ಯಾವ ಕಾಲನ್ನು ಹಿಡಿಯಬೇಕು?

ಮುಂಗಾಲಿಗೇ ಎನ್ನಲು ಮಂತ್ರಿಗಳ ಕಾಲಿಗೆರಗುವ ಮಂದಿಯೇ ಸಾಕ್ಷಿ.

ಜಿ. ಸುಬ್ರಹ್ಮಣ್ಯ, ಬೆಂಗಳೂರು

ಸೀತೆ ಸ್ವರ್ಣಮೃಗದಿಂದ ಮೋಹಿತಳಾದ ಕಾಲದಲ್ಲಿ ನಾರಿಯರಿಗೆ ಚಿನ್ನದ ಮೋಹ ಅತಿಯಾಗಿತ್ತಲ್ಲವೆ?

ಊಹೂಂ. ಲೋಪಾಮುದ್ರೆ ಸೀತೆಗೆ ಅನೇಕ ನಗಗಳನ್ನು ಇತ್ತಿದ್ದೇ ಇದಕ್ಕೆ ಸಾಕ್ಷಿ.

## ಬಹುಮಾನಿತ ಪ್ರಶ್ನೆ

ಮಹಾವೀರ ಕಾಸರ, ಶಿವಮೊಗ್ಗ

ಮನೆಯವಳನ್ನು ಶಾಪಿಂಗಿಗೆ ಕರೆದೊಯ್ದಾಗ ಅನುಸರಿಸಬೇಕಾದ ಮುನ್ನೆಚ್ಚರಿಕೆ ಏನು?

'ಅದ್ಯಾಕ್ಬೇಕೀಗ?' ಎಂದು ತಪ್ಪಿಯೂ ನುಡಿಯದಿರುವುದು.

ಹರಿತಸ, ಬೆಂಗಳೂರು

ಗೆದ್ದೆತ್ತಿನ ಬಾಲದ ವಿವರಣೆ ಕೊಡುವಿರಾ?

ಅದು ನೋಡಲು, ಹಿಡಿಯಲು ಚೆನ್ನ; ಹಿಡಿದವರಿಗೆ ಗಂಜಲವೇ ಗಟ್ಟಿ.

ಕೆ.ಎಸ್. ಸೋಮೇಶ್ವರ, ಬೆಂಗಳೂರು

ಧಾರಾವಾಹಿಗಳಲ್ಲಿ ಬಡವರ ಪಾತ್ರಗಳ ಅಲಂಕಾರ, ಮೇಕಪ್ಪೂ ರಾಜರಾಣಿಯರ ತರಹ ಇರುವುದರ ಗುಟ್ಟೇನು?

'ಒಂದೇ ತರಹ ಮೇಕಪ್ ಮಾಡ್ಬಿಟ್ಟರೆ; ಕಂತಿನ ಕಥೆ ಇನ್ನೂ ಬಂದಿಲ್ಲ' ಎಂಬ ನಿರ್ದೇಶಕನ ಆಣತಿಯಂತೆ.

ಬಿ.ಆರ್. ಉಷಾ, ಕೆನಡಾ

ಹೆಣ್ಣು ಕೇಳುವ ಪ್ರಶ್ನೆಗೂ, ಗಂಡು ಕೇಳುವ ಪ್ರಶ್ನೆಗೂ ವ್ಯತ್ಯಾಸವೇನು?



ಹೆಣ್ಣಿನ ಪ್ರಶ್ನೆಗಳು ಹೃದಯಕ್ಕೆ ಹತ್ತಿರ; ಗಂಡಿನ ಪ್ರಶ್ನೆಗಳು ಬುದ್ಧಿಗೆ (ಮೆದುಳಿಗೆ) ಹತ್ತಿರ.

ಪಿ. ಶಂಕರಪ್ಪ, ಶಿವಮೊಗ್ಗ

ಇಂದು ಉನ್ನತ ಹುದ್ದೆಯಲ್ಲಿರುವವರು ಏಕಾಧಿಪತ್ಯದ ವಿರುದ್ಧ ಉಸಿರು ಬಿಡುತ್ತಿಲ್ಲವೇಕೆ?

ಹುದ್ದೆ ಹೋಗಿ ಮುದ್ದೆ ತಿನ್ನುವ ಸ್ಥಳ ತಲುಪೀಯೇವೆಂಬ ಭಯವಂತೆ.

ರಮೇಶ ಜಿ. ಬೊಂಗಾಳೆ, ಬೈಲಹೊಂಗಲ

ಮನಸ್ಸಿಗೂ, ವಯಸ್ಸಿಗೂ ವ್ಯತ್ಯಾಸವೇನು?

ವಯಸ್ಸು ತೆರೆಗೆಯಂತೆ ಸದಾ ಏರುಮುಖಿ. ಮನಸ್ಸು ಆಟೊದ ಚಲನೆಯಂತೆ – ಅಡ್ಡಾದಿಡ್ಡಿ.

■ ರಾಮ್